ಲಿಂಕಿಂಗ್ ವಿತ್ ಮಾರ್ಕೆಟಿಂಗ್ ಯೋಜನೆಯಲ್ಲಿ ರೈತರಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

1334. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿ ವ್ಯವಸಾಯ ಸಹಕಾರ ಸಂಘಗಳ ಮುಖಾಂತರ ಲಿಂಕಿಂಗ್ ವಿತ್ ಮಾರ್ಕೆಟಿಂಗ್ ಯೋಜನೆಯಲ್ಲಿ ರೈತರು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಿಸಿ ಅವರ ಸಾಲಗಳಿಗೆ ಜಮಾ ಪಡೆಯುವ ಯೋಜನೆಯಲ್ಲಿ ರೈತರಿಗೆ ಶೇಕಡಾ 5 ಪ್ರೋತ್ಸಾಹ ಧನ ಕೊಡುವುದು 1983 ರಿಂದ ಜಾರಿಯಲ್ಲಿ ಇರುವುದು ನಿಜವೇ ;

ಆ) ಈ ಯೋಜನೆಯಲ್ಲಿ 1986-87 ರಿಂದ 88-89 ರವರೆಗೆ ಎಷ್ಟು ಸಂಘಗಳು ಈ ವ್ಯವಹಾರ ಕೈಗೊಂಡಿದ್ದವು ;

ಇ) ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಯಾವ ಸಹಕಾರ ಸಂಘಗಳಿಗೆ ಎಷ್ಟು ಬಾಕಿ ನೀಡಬೇಕಾಗಿದೆ ;

ಈ) ಹಾಗಾದರೆ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) 15 ತುಮಕೂರು ಜಿಲ್ಲೆಯಲ್ಲಿ.

ಇ) ರೂ. 2,60,510 ಬಾಕಿ ಇಲ್ಲ.

ಈ) ಉದ್ಭವಿಸುವುದಿಲ್ಲ.

ಆಮಾನತ್ತಿಗೊಳಗಾದ ನ್ಯಾಯಬೆಲೆ ಅಂಗಡಿಗಳ ಬಗ್ಗೆ

1395. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಮಾನತ್ತಿಗೊಳಗಾದ ನ್ಯಾಯಬೆಲೆ ಅಂಗಡಿಗಳನ್ನು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಉಸ್ತುವಾರಿಗೆ ವಹಿಸಲ್ಪಟ್ಟಾಗ ಸದರೀ ನಿಗಮಕ್ಕೆ ಸಾಕಷ್ಟು ಸಿಬ್ಬಂದಿ ಮತ್ತು ಹೊಂದಿಕೊಂಡ ಸೌಲಭ್ಯಗಳ ಕೊರತೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇಂತಹ ನ್ಯಾಯಬೆಲೆ ಅಂಗಡಿಗಳಿಂದ ವರ್ಗಾಯಿಸಲ್ಪಟ್ಟ ಪಡಿತರ ಚೀಟಿದಾರರಿಗೆ ತಮ್ಮ ಪಡಿತರ ವಸ್ತುಗಳನ್ನು ಪಡೆಯಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಈ ಪರಿಸ್ಥಿತಿಯನ್ನು ಪರಿಹರಿಸಲು ಯಾವ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ ?